O.S.122-2023
ಪಿ.ಡಬ್ಲು-೧

ದಿ: 19.01.2026 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು</u>: ಪ್ರತಿವಾದಿಗಳ ಪರ ಶ್ರೀಯುತ ಹೆಚ್.ಎಸ್.ಆರ್. ವಕೀಲರಿಂದ.

6. ನಾನು ದಾವಾ ಆಸ್ತಿಗಳನ್ನು ಅಳತೆ ಮಾಡಿಸಿದ್ದೇನೆ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳನ್ನು ಅಳತೆ ಮಾಡಲಾಗಿದೆ ಎನ್ನುವ ಕುರಿತು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕ್ರಯ ಪತ್ರ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿ.16 ರಲ್ಲಿ ಕಾಣಿಸಿರುವಂತೆ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.16 ರಲ್ಲಿ ಉತ್ತರ ಎಂದು ಕಾಣಿಸಿರುವ ದಿಕ್ಕಿಗಳ ಚಿಹ್ನೆಯ ಹತ್ತಿರ ಸಂಬಂಧಿಸಿದ ಪ್ರಾಧಿಕಾರದ ಅಧೀಕಾರಿಯ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ.16 ರಲ್ಲಿನ ದಿಕ್ಕುಗಳ ಚಿಹ್ನೆಯಲ್ಲಿ **<u>+ N</u>** ಎನ್ನುವ ನಮೂದನ್ನು ಸ್ವತ: ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.16 ರಲ್ಲಿನ ದಿಕ್ಕುಗಳ ಚಿಹ್ನೆಯಲ್ಲಿ ಕಾಣಿಸಿರುವ **<u>+ N</u>** ಎನ್ನುವ ನಮೂದು ಪ್ರಾಧಿಕಾರದಿಂದ ನಮೂದಿಸಿರುವ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ.

7. ಪೂರ್ವ ಮತ್ತು ದಕ್ಷಿಣದ ಕಡೆ ಇರುವ ಪ್ರತಿವಾದಿಗಳ ಜಮೀನಿಗೆ ಮತ್ತು ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ದಕ್ಷಿಣದ ಕಡೆ ಇರುವ ಜಮೀನಿಗೆ ನನಗೆ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಪೂರ್ವದ ಕಡೆ ಇರುವ ಜಮೀನಿನ ಕುರಿತು ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ಆಸ್ತಿ ಸಂಖ್ಯೆ 18 ಮತ್ತು 19 ಆಸ್ತಿಗಳ ವಿಸ್ತೀರ್ಣದ ಕುರಿತು ನನಗೆ ಮಾಡಿಕೊಡಲಾಗಿದೆ ಎಂದು ಹೇಳುವ ಕ್ರಯ ಪತ್ರ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಖಾತಾ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ.21(5) ರಲ್ಲಿ ಪಾಯಾ ಹಾಕಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ.21(5) ರಲ್ಲಿನ ಪಾಯದ ಪೂರ್ವ ದಿಕ್ಕಿನಲ್ಲಿರುವ ಆಸ್ತಿ ಪ್ರತಿವಾದಿಗಳಿಗೆ ಸಂಬಂಧಿಸಿದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.21(೫) ರಲ್ಲಿರುವ ಪಾಯವನ್ನು ಪ್ರತಿವಾದಿಗಳ ಜಾಗದಲ್ಲಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.21(೫) ರಲ್ಲಿ ಕಾಣಿಸಿರುವ ಪಾಯವನ್ನು ತೆಗೆಯಿಸಿ ಸ್ವಾಧೀನತೆಯನ್ನು ದೊರಕಿಸಿ ಕೊಡುವಂತೆ ನ್ಯಾಯಾಲಯದಲ್ಲಿ ಯಾವುದಾದರು ಪರಿಹಾರವನ್ನು ಕೇಳಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ಆಸ್ತಿಯಲ್ಲಿ ಪಾಯ ಹಾಕಲು ಬಂದಾಗ ಅಡ್ಡಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.21(೫) ಮತ್ತು 21(೬) ಛಾಯಾಚಿತ್ರಗಳಲ್ಲಿ ಕಾಣುತ್ತಿರುವ ಪಾಯ ನಮ್ಮ ದಾವಾ ಆಸ್ತಿಯಲ್ಲಿರುವ ಪಾಯವಾಗಿರುತ್ತದೆ. ಆ ರೀತಿ ನಿಪಿ.21(೫) ಮತ್ತು 21(೬) ಛಾಯಾಚಿತ್ರಗಳಲ್ಲಿ ಕಾಣುತ್ತಿರುವ ಪಾಯ ನಮ್ಮ ದಾವಾ ಆಸ್ತಿಯಲ್ಲಿ ಮಾಡಲಾಗಿರುತ್ತದೆ ಮತ್ತು ಅದನ್ನು ತೆಗೆಯಿಸಿ ಸ್ವಾಧೀನವನ್ನು ದೊರಕಿಸಿಕೊಡುವಂತೆ ವಾದ ಪತ್ರದಲ್ಲಿ ಪ್ರತ್ಯೇಕ ಪರಿಹಾರವನ್ನು ಕೇಳಿರುತ್ತೇನೆ. ಪ್ರತಿವಾದಿಗಳು ದಾವಾ ಆಸ್ತಿಯ ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣ ಎಷ್ಟು ವಿಸ್ತೀರ್ಣದಲ್ಲಿ ಪಾಯವನ್ನು ಮಾಡಿರುತ್ತಾರೆ ಎಂದು ವಾದ ಪತ್ರದಲ್ಲಿ ಕಾಣಿಸಿರುತ್ತೇನೆ. ನನ್ನ ಪ್ರಕಾರ ಪ್ರತಿವಾದಿಗಳು ಪೂಪ -7 ಅಡಿ ಮತ್ತು ಉತ್ತರ ದಕ್ಷಿಣ -52 ಅಡಿ ವಿಸ್ತೀರ್ಣದ ಒತ್ತುವರಿ ಮಾಡಿರುತ್ತಾರೆ. ಆ ರೀತಿ ಪ್ರತಿವಾದಿಗಳು ಪೂಪ -7 ಅಡಿ ಮತ್ತು ಉತ್ತರ ದಕ್ಷಿಣ -52 ಅಡಿ ವಿಸ್ತೀರ್ಣದ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಮತ್ತು ಉಳಿಕೆ ವಿಸ್ತೀರ್ಣದ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ವಾದ ಪತ್ರದಲ್ಲಿ ಕಾಣಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ.

8. ಆ ರೀತಿ ಪ್ರತಿವಾದಿಗಳು ಪೂಪ -7 ಅಡಿ ಮತ್ತು ಉತ್ತರ ದಕ್ಷಿಣ -52 ಅಡಿ ವಿಸ್ತೀರ್ಣದ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ಹೇಳುವ ಜಾಗದ ಚಕ್ಕುಬಂದಿ ಪೂರ್ವಕ್ಕೆ ಪ್ರತಿವಾದಿಗಳ ಆಸ್ತಿ, ಪಶ್ಚಿಮಕ್ಕ ನನ್ನ ಆಸ್ತಿ ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಗಳ ಆಸ್ತಿ ಇರುತ್ತದೆ. ಈ ಮೇಲೆ ಹೇಳಿದ ಒತ್ತುವರಿ ಮಾಡಲಾಗಿದೆ ಎಂದು ಹೇಳುವ

ಚಕ್ಕುಬಂದಿಯನ್ನು ವಾದ ಪತ್ರದಲ್ಲಿ ಪ್ರತ್ಯೇಕ ಅನುಸೂಚಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ನಿಪಿ.16 ನಕ್ಷೆಯಂತೆ ನಾನು ವಾದ ಪತ್ರದಲ್ಲಿ ಕಾಣಿಸಿರುವ ಆಸ್ತಿ ಸಂಖ್ಯೆ 18 ಮತ್ತು 19 ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ಕ್ರಯ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ದಾಖಲಿಸುವ ಸಮಯದಲ್ಲಿ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.21(ಙ) ಮತ್ತು 21(ಛ) ಛಾಯಾಚಿತ್ರಗಳಲ್ಲಿ ಕಾಣುತ್ತಿರುವ ಪಾಯವನ್ನು ಪ್ರಸ್ತುತ ದಾವೆ ದಾಖಲಿಸುವ ಪೂರ್ವದಲ್ಲಿ ಮಾಡಲಾಗಿರುವ ಪಾಯ ಎಂದರೆ ಸರಿ. ಸಾಕ್ಷಿಯು ಸ್ವಲ್ಪ ಸಮಯದ ನಂತರ ದಾವೆ ದಾಖಲಿಸಿದ ನಂತರ ಆ ರೀತಿ ಪಾಯ ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.21(ಙ) ಮತ್ತು 21(ಛ) ರಲ್ಲಿ ಕಾಣಿಸಿರುವ ಪಾಯವನ್ನು ದಾವೆ ದಾಖಲಿಸಿದ ನಂತರ ಮಾಡಲಾಗಿರುತ್ತದೆ ಎನ್ನುವ ಕುರಿತು ವಾದ ಪತ್ರದಲ್ಲಿ ಯಾವುದಾದರು ತಿದ್ದುಪಡಿ ಮಾಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದರಿ ಪಾಯ ನಮ್ಮ ಆಸ್ತಿಯಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.21(ಙ) ಮತ್ತು 21(ಛ) ರಲ್ಲಿ ಕಾಣಿಸಿರುವ ಪಾಯ ಪ್ರತಿವಾದಿಗಳ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ಪಾಯವಾಗಿರುತ್ತದೆ ಎಂದರೆ ಸರಿ. ನಾನು ಪ್ರಸ್ತುತ ದಾವೆ ದಾಖಲಿಸುವ ಸಮಯದಲ್ಲಿ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

9. ನಿಪಿ.21(ಙ) ಮತ್ತು 21(ಛ) ರಲ್ಲಿ ಕಾಣಿಸಿರುವ ಪಾಯವನ್ನು ಯಾವ ದಿನಾಂಕದಂದು ಮಾಡಲಾಗಿರುತ್ತದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿ: 09.04.2023 ರಂದು ನಾನು ಹೋಗಿ ನೋಡಿದಾಗ ಪಾಯ ಮಾಡಿರುವುದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತಿವಾದಿಗಳು ಪಾಯಾ ಹಾಕಿದ್ದಾರೆ ಎನ್ನುವ ಕುರಿತು ಲಿಖಿತವಾಗಿ ಪೊಲೀಸ್ ಪಿರ್ಯಾದ್ದನ್ನು ನೀಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಿರ್ಯಾದ್ದು ನೀಡಲು ಹೋದಾಗ ಸ್ವಿಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ನೀಡಿದ್ದೆ ಎಂದು ಹೇಳುವ ಲಿಖಿತ ಪಿರ್ಯಾದ್ದನ್ನು ಹೊಸಕೋಟೆ ಪೊ.ಠಾಣೆಯವರು ಸ್ವಿಕರಿಸಿರುವುದಿಲ್ಲ ಎನ್ನುವ ಕುರಿತು ಉಪಅಧೀಕ್ಷಕರಿಗೆ ಯಾವುದಾದರು ದೂರು ನೀಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಹೇಳಿದ ನಂತರ ಪ್ರತಿವಾದಿಗಳು ಕಾಂಪೌಂಡ್ ಗೋಡೆಯನ್ನು ಕಟ್ಟುವುದನ್ನು ನಿಲ್ಲಿಸಿದ ಮೇರೆಗೆ ದೂರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿ: 09.04.2023 ರಂದು ಬೆಳಿಗ್ಗೆ ಸುಮಾರು 10.30 ಗಂಟೆಗೆ ದಾವಾ ಆಸ್ತಿಯ ಬಳಿ ಹೋಗಿರುತ್ತೇನೆ. ಆ ರೀತಿ ನಾನು ದಾವಾ ಆಸ್ತಿಗೆ ಭೇಟಿ ನೀಡಿದ್ದೆ ಎಂದು ಹೇಳುವ ಸಮಯದಲ್ಲಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗುತ್ತಿತ್ತು. ಆ ರೀತಿ ನಾನು ದಾವಾ ಆಸ್ತಿಗೆ ಭೇಟಿ ನೀಡಿದ್ದೆ ಎಂದು ಹೇಳುವ ಸಮಯದಲ್ಲಿ ಕೆಲಸಗಾರರು ಮತ್ತು ಒಬ್ಬ ವ್ಯಕ್ತಿ ನಿಂತು ಕೆಲಸ ಮಾಡಿಸುತ್ತಿದ್ದರು. ದಿ: 09.04.2023 ರಂದು ನಿಪಿ.21(ಙ) ಮತ್ತು ನಿಪಿ.21(ಛ) ಛಾಯಾಚಿತ್ರದಲ್ಲಿ ಕಾಣುತ್ತಿರುವ ಪಾಯವನ್ನು ಮಾಡಿ ಮುಗಿಸಲಾಗಿತ್ತು. ದಿ: 09.04.2023 ರಂದು ಪ್ರತಿವಾದಿಗಳು ದಾವಾ ಆಸ್ತಿಯ ಬಳಿ ಬಂದಿರಲಿಲ್ಲ ಎಂದರೆ ಸರಿ. ನಾನು ವಾದ ಪತ್ರದಲ್ಲಿ ಕಾಣಿಸಿರುವಂತೆ ನನಗೆ ಸಂಬಂಧಿಸಿದ ಯಾವುದೇ ಆಸ್ತಿಗಳು ಇರುವುದಿಲ್ಲ ಮತ್ತು ಪ್ರತಿವಾದಿಗಳು ಯಾವುದೇ ದಾವಾ ಆಸ್ತಿ ಬಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.